Form No.9(Civil)
Title Sheet for
Judgement in
Suits
(R.P.91)

Govt. of Karnataka [C.R.P.67]

TITLE SHEET FOR JUDGEMENT IN SUITS

ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಲಕ್ಷ್ಮೇಶ್ವರ.

ಉಪಸ್ಥಿತರುಃ ಶ್ರೀ ಹಾಜಿಹುಸೇನಸಾಬ ಯಾದವಾಡ.
ಬಿ.ಕಾಂ. ಎಲ್.ಎಲ್.ಬಿ., (ಸ್ಪೇ)
ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.
ಲಕ್ಷ್ಮೇಶ್ವರ.

ಅಸಲು ದಾವಾ ಸಂ. 59/2016

ದಿನಾಂಕ 23ನೇ ಜೂನ್ 2018

ವಾದಿಯರು

1) ಶ್ರೀಮತಿ ಲಕ್ಷ್ಮವ್ವ ಉರ್ಫ್ ಹುಲಿಗೆವ್ವ ಕೋಂ ಹನಮಪ್ಪ ಕುರಿಯವರ,
ವಯಾಃ 59 ವರ್ಷ, ಉಃ ಶೇತ್ಕಿ,
ಸಾಃ ಬೆಳಗಟ್ಟಿ, ತಾಃ ಶಿರಹಟ್ಟಿ, ಈಗ ಸದ್ಯ ಇರುವುದು
ಮುಂಡರಗಿ, ತಾಃ ಮುಂಡರಗಿ, ಜಿಃ ಗದಗ.

2) ಶ್ರೀ ಸಣ್ಣಫಕ್ಕೀರಪ್ಪ ತಂದೆ ಮಲಕಾಜಪ್ಪ ಘಟರಡ್ಡಿಹಾಳ,
ವಯಾಃ 75 ವರ್ಷ, ಉಃ ಶೇತ್ಕಿ,
ಸಾಃ ಶಿರಹಟ್ಟಿ, ಈಗ ಸದ್ಯ ಇರುವುದು ಪಾಪನಾಶಿ,
ತಾಃ ಜಿಃ ಗದಗ.

3) ಶ್ರೀ ಶಿವಪ್ಪ ತಂದೆ ಮಲಕಾಜಪ್ಪ ಘಟರಡ್ಡಿಹಾಳ,
ವಯಾಃ 70 ವರ್ಷ, ಉಃ ಶೇತ್ಕಿ,
ಸಾಃ ಬೆಳಗಟ್ಟಿ, ತಾಃ ಶಿರಹಟ್ಟಿ, ಜಿಃ ಗದಗ.

4) ಶ್ರೀ ಗಂಗಪ್ಪ ತಂದೆ ಮಲಕಾಜಪ್ಪ ಘಟರಡ್ಡಿಹಾಳ,
ವಯಾಃ 65 ವರ್ಷ, ಉಃ ಶೇತ್ಕಿ,
ಸಾಃ ಬೆಳಗಟ್ಟಿ, ತಾಃ ಶಿರಹಟ್ಟಿ, ಈಗ ಸದ್ಯ ಇರುವುದು
ಮುಂಡರಗಿ, ತಾಃ ಮುಂಡರಗಿ, ಜಿಃ ಗದಗ.

(ಶ್ರೀ. ಆರ್.ಸಿ.ಪಿ., ನ್ಯಾಯವಾದಿಗಳು)

- ವಿರುದ್ಧ –

<u>ಪ್ರತಿವಾದಿಯರು</u>

1) ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ,
ಮೇಃ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕಾ ಪಂಚಾಯತ,
ಶಿರಹಟ್ಟಿ, ತಾಃ ಶಿರಹಟ್ಟಿ, ಜಿಃ ಗದಗ.

2) ಗ್ರಾಮ ಪಂಚಾಯತಿ ವಡವಿ ಇವರ ವತಿಯಿಂದ,
ಕಾರ್ಯದರ್ಶಿ, ಸಾಃ ವಡವಿ, ತಾಃ ಶಿರಹಟ್ಟಿ, ಜಿಃ ಗದಗ.

3) ಶ್ರೀಮತಿ ನಿಂಗವ್ವ ಕೋಂ ದೊಡ್ಡಫಕ್ಕೀರಪ್ಪ ಘಟರಡ್ಡಿಹಾಳ,
ವಯಾಃ 72 ವರ್ಷ, ಉಃ ಶೇತ್ಕಿ,
ಸಾಃ ಬೆಳಗಟ್ಟಿ, ತಾಃ ಶಿರಹಟ್ಟಿ, ಜಿಃ ಗದಗ.

4) ಶ್ರೀ ಅಶೋಕ ತಂದೆ ದೊಡ್ಡಫಕ್ಕೀರಪ್ಪ ಘಟರಡ್ಡಿಹಾಳ,
ವಯಾಃ 35 ವರ್ಷ, ಉಃ ಶೇತ್ಕಿ,
ಸಾಃ ಬೆಳಗಟ್ಟಿ, ತಾಃ ಶಿರಹಟ್ಟಿ, ಜಿಃ ಗದಗ.

5) ಶ್ರೀಮತಿ ಶೋಭಾ ಕೋಂ ನಾಗಪ್ಪ ಹಡೆಗಾರ,
ವಯಾಃ 41 ವರ್ಷ, ಉಃ ಮನೆಗೆಲಸ,
ಸಾಃ ಮುಂಡರಗಿ, ಶಿರೋಳಕ್ಕೆ ಹೋಗುವಾದ ಮಠದ
ಜಾಗೆಯಲ್ಲಿ ಮನೆ ಇದೆ, ತಾಃ ಮುಂಡರಗಿ, ಜಿಃ ಗದಗ.

6) ಶ್ರೀಮತಿ ಸುನಿತಾ ಕೋಂ ರಾಮಣ್ಣಾ ಬಳ್ಳಾರಿ,
ವಯಾಃ 37 ವರ್ಷ, ಉಃ ಮನೆಗೆಲಸ,
ಸಾಃ ಮುಂಡರಗಿ ಮಾರುತಿ ದೇವಸ್ಥಾನ ಹತ್ತಿರ,
ಕೋಟೆ ಭಾಗ, ತಾಃ ಮುಂಡರಗಿ, ಜಿಃ ಗದಗ.

7) ಶ್ರೀಮತಿ ಶಾಂತವ್ವ ಕೋಂ ಬಸವರಾಜ ಘಟರಡ್ಡಿಹಾಳ,
ವಯಾಃ 51 ವರ್ಷ, ಉಃ ಮನೆಗೆಲಸ,
ಸಾಃ ಪಾಪನಾಶಿ, ತಾಃ ಜಿಃ ಗದಗ.

8) ಶ್ರೀಮತಿ ರತ್ನವ್ವ ಕೋಂ ರವಿ ಘಟರಡ್ಡಿಹಾಳ,
ವಯಾಃ 52 ವರ್ಷ, ಉಃ ಮನೆಗೆಲಸ,
ಸಾಃ ಪಾಪನಾಶಿ, ತಾಃ ಜಿಃ ಗದಗ.

9) ಕುಮಾರಿ ಬಸವಣ್ಣೆವ್ವ ತಂದೆ ರವಿ ಘಟರಡ್ಡಿಹಾಳ,
ವಯಾಃ 14 ವರ್ಷ, ಉಃ ವಿದ್ಯಾರ್ಥಿ.

10) ಕುಮಾರಿ ಪ್ರಿಯಾ ತಂದೆ ರವಿ ಘಟರಡ್ಡಿಹಾಳ,
ವಯಾಃ 13 ವರ್ಷ, ಉಃ ವಿದ್ಯಾರ್ಥಿ.

11) ಕುಮಾರ ರಾಘವೇಂದ್ರ ತಂದೆ ರವಿ ಘಟರಡ್ಡಿಹಾಳ,
ವಯಾ: 10 ವರ್ಷ, ಉ: ವಿದ್ಯಾರ್ಥಿ,
ಸಾ: ಪಾಪಿನಾಶಿ, ತಾ: ಜಿ: ಗದಗ.
ಪ್ರತಿವಾದಿ 9 ರಿಂದ 10 ರವರ ಅಲ್ಪವಯಿ ಸಂರಕ್ಷಣೆದಾರಳಾದ
ತಾಯಿ 8ನೇ ಪ್ರತಿವಾದಿ.

12) ಶ್ರೀ ಕುಬೇರಪ್ಪ ತಂದೆ ಬಸವರಾಜ ಘಟರಡ್ಡಿಹಾಳ,
ವಯಾ: 31 ವರ್ಷ, ಉ: ಶೇತ್ಕಿ,
ಸಾ: ಪಾಪನಾಶಿ, ತಾ: ಜಿ: ಗದಗ.

13) ಶ್ರೀಮತಿ ರೂಪಾ ತಂದೆ ಬಸವರಾಜ ಘಟರಡ್ಡಿಹಾಳ,
ವಯಾ: 40 ವರ್ಷ, ಉ: ಮನೆಗೆಲಸ,
ಸಾ: ಜಿ.ಕೋಡಿಹಳ್ಳಿ, ತಾ: ಹಗರಿಬೊಮ್ಮನಹಳ್ಳಿ, ಜಿ: ಬಳ್ಳಾರಿ.

14) ಶ್ರೀಮತಿ ಗಂಗವ್ವ ಕೋಂ ಗಂಗಪ್ಪ ಘಟರಡ್ಡಿಹಾಳ,
ವಯಾ: 50 ವರ್ಷ, ಉ: ಶೇತ್ಕಿ ವ ಕೂಲಿ,
ಸಾ: ಮುಷಿ.ಕೊಪ್ಪ, ತಾ: ಮುಂಡರಗಿ, ಜಿ: ಗದಗ.

(ಪ್ರತಿವಾದಿ 1 ಮತ್ತು 2 ಶ್ರೀ. ಎಂ.ಐ.ಎಸ್., ನ್ಯಾಯವಾದಿಗಳು)
(ಪ್ರತಿವಾದಿ 3 ಮತ್ತು 4 ಶ್ರೀ. ವಿ.ಎಲ್.ಪಿ., ನ್ಯಾಯವಾದಿಗಳು)
(ಪ್ರತಿವಾದಿ 7 ಶ್ರೀ. ಬಿ.ಸಿ.ಪಿ., ನ್ಯಾಯವಾದಿಗಳು)
(ಪ್ರತಿವಾದಿ 5, 6, 8 ರಿಂದ 14 ಏಕತರ್ಫಿ)

| | | | | |
|---|---|---|---|---|
| ದಾವೆ ದಾಖಲಾದ ದಿನಾಂಕ | : 04-06-2016 | | | |
| ದಾವೆಯ ಸ್ವರೂಪ | : ಹಿಸ್ಸೆ-ದಿಸ್ಸೆಗಾಗಿ ದಾವೆ | | | |
| ಸಾಕ್ಷಿ ಪ್ರಾರಂಭವಾದ ದಿನಾಂಕ | : 10-07-2017 | | | |
| ತೀರ್ಪು ಘೋಷಿಸಿದ ದಿನಾಂಕ | : 23-06-2018 | | | |
| ಒಟ್ಟು ಅವಧಿ | : | ವರ್ಷ | ತಿಂಗಳು | ದಿನ |
| | | 02 | 00 | 19 |

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ.ಗಳು, ಲಕ್ಷ್ಮೇಶ್ವರ.

## ತೀರ್ಪು

ವಾದಿಯರು ಈ ದಾವೆಯನ್ನು ಪ್ರತಿವಾದಿಯರ ವಿರುದ್ದ 3 ರಿಂದ 14ನೇ ಪ್ರತಿವಾದಿಯರು ದಿನಾಂಕ 28-04-2006 ರಂದು 1 ಮತ್ತು 2ನೇ ಪ್ರತಿವಾದಿಯರಿಗೆ ದಾವಾ ಆಸ್ತಿಗೆ ಸಂಬಂಧಿಸಿದಂತೆ ಮಾಡಿಕೊಟ್ಟ ಖರೀದಿ ಪತ್ರವು ವಾದಿಯರಿಗೆ ಬಂಧನಕಾರಿ ಇರುವುದಿಲ್ಲವೆಂದು ಆದೇಶಿಸಿ, ದಾವಾ ಆಸ್ತಿಯಲ್ಲಿ 1/7 ಅಂಶ ಹಿಸ್ಸೆಯನ್ನು ಕೊಡಿಸಬೇಕೆಂದು ಮತ್ತು ಇತರೆ ನ್ಯಾಯಾಲಯಕ್ಕೆ ಸರಿಕಂಡ ನ್ಯಾಯಾಶ್ರಯ ಹಾಗೂ ದಾವೆಯ ಖರ್ಚನ್ನು ಕೊಡಿಸಬೇಕೆಂದು ಕೋರಿ ಈ ದಾವೆ ಸಲ್ಲಿಸಿದ್ದಾರೆ.


## ವಾದಪತ್ರದ ಸಂಕ್ಷೇಪ್ತ ಪಕ್ಷಿ ನೋಟ

2. ವಾದ ಪತ್ರದಲ್ಲಿ ತೋರಿಸಿದ ದಾವಾ ಆಸ್ತಿ ವರ್ಣನೆ ಈ ರೀತಿ ಇದೆ.

ಶಿರಹಟ್ಟಿ ತಾಲೂಕ ಪೈಕಿ ಬೆಳಗಟ್ಟಿ ಗ್ರಾಮದ ಹದ್ದಿಯಲ್ಲಿ ಬರುವ ಜಮೀನು ಜಮೀನು ರಿ.ಸ. ನಂ.3/3 ಕ್ಷೇತ್ರ 07 ಎಕರೆ 31 ಗುಂಟೆ ಇದರ ಚೆಕಬಂದಿ ಈ ಕೆಳಗಿನಂತಿರುತ್ತದೆ.

| | |
|---|---|
| ಪೂರ್ವಕ್ಕೆ | ರಂಗನಗೌಡ ಪಾಟೀಲ ಮತ್ತು ರಾಮಪ್ಪ ಗುಂಡೂರ ಇವರ ಜಮೀನು |
| ಪಶ್ಚಿಮಕ್ಕೆ | ಸರ್ಕಾರಿ ರಸ್ತೆ |
| ಉತ್ತರಕ್ಕೆ | ರಿ.ಸ. ನಂ.3/3 ಇದರ ಪೈಕಿ ಉಳಿದ ಜಮೀನು ಶ್ರೀ ನೀಲಪ್ಪ ಮಹಾದೇವಪ್ಪ ಬಡಿಗೇರಿ ಇವರ ಜಮೀನು |
| ದಕ್ಷಿಣಕ್ಕೆ | ದುರ್ಗಪ್ಪ ಕೆಂಚೆಲ್ಲಪ್ಪ ಜೋಗೆರ ಇವರ ಜಮೀನು |

3. ವಾದ ಪತ್ರದಲ್ಲಿ ತೋರಿಸಿರುವ ವಾದಿಯರ, ಪ್ರತಿವಾದಿಯರ ಮನೆತನದ ವಂಶಾವಳಿ.




4. ದಾವಾ ಆಸ್ತಿಯು ವಾದಿಯರ ಮತ್ತು ಪ್ರತಿವಾದಿಯರ ಸಾಮೂಹಿಕ ಏಕತ್ರ ಘರಾಣೆಯ ಮೂಲ ಪುರುಷನಾದ ಮಲಕಾಜಪ್ಪನ ಪಿತ್ರಾರ್ಜಿತ ಆಸ್ತಿಯಾಗಿದ್ದು, ದಾವಾ ಆಸ್ತಿಯನ್ನು ವಾರಸಾ ನಾತೆಯಿಂದ ವಾದಿಯರು ಮತ್ತು ಪ್ರತಿವಾದಿಯರು ಉಪಭೋಗ ಮಾಡುತ್ತಾ ಬಂದಿದ್ದು, ಮಲಕಾಜಪ್ಪನು ದಿನಾಂಕ 26-05-1971 ರಂದು ಮೃತಪಟ್ಟ ನಂತರ ದೊಡ್ಡಫಕ್ಕೀರಪ್ಪನು ವಾದಿಯರ, ಪೋತಿ ಬಸವರಾಜ ಹಾಗೂ ಪೋತಿ ಹುಲಿಗೆವ್ವ ಇವರಿಗೆ ತಪ್ಪು ತಿಳುಳಿಕೆ ಕೊಟ್ಟು ಅವರ ಸಮ್ಮತಿಯಿಲ್ಲದೇ ದಾವಾ ಆಸ್ತಿಯನ್ನು ಸರ್ಕಾರಿ ಅಧಿಕಾರಿಗಳೊಂದಿಗೆ ಮಿಲಾಪಿಯಾಗಿ ದಿನಾಂಕ 30-06-2071 ರಂದು 'ಡ' ಸಂಖ್ಯೆ 528 ರಲ್ಲಿ ಮೋಸದ ಬನಾವಟಿಯ ಒಂದು ಖೊಟ್ಟಿ ವರದಿಯನ್ನು ಸೃಷ್ಟಿಸಿಕೊಂಡು ತಪ್ಪು ದಾಖಲೆಯನ್ನು ಮಾಡಿರುತ್ತಾರೆ. ದೊಡ್ಡಫಕ್ಕೀರಪ್ಪನು ತನ್ನ ಕೆಟ್ಟ ಚಟಗಳಿಗಾಗಿ ವಾದಿಯರಿಗೆ ಗೊತ್ತಿಲ್ಲದ

ಹಾಗೇ ಚಾಣಾಕ್ಷ ಬುದ್ದಿಯನ್ನು ಹಾಗೂ ಚಾತುರ್ಯವನ್ನು ಉಪಯೋಗಿಸಿಕೊಂಡು ದಾವಾ ಆಸ್ತಿಯ ಮೇಲೆ ಬ್ಯಾಂಕಿನಿಂದ ಸಾಲ ತೆಗೆದಿದ್ದು, ಮೂಲ ಪುರುಷನ ಹೆಸರಿಗೆ 1970-71ನೇ ಸಾಲಿನಲ್ಲಿದ್ದ ರಿ.ಸ. ನಂ.3/3 ಕ್ಷೇತ್ರ 12 ಎಕರೆ ಜಮೀನನ್ನು ದೊಡ್ಡಫಕ್ಕೀರಪ್ಪನು ಕುಟುಂಬದ ಮ್ಯಾನೇಜರ ಅಂತಾ ತನ್ನ ಹೆಸರನ್ನು ಮಾತ್ರ ಸೇರಿಸಿಕೊಂಡು 2003 ರಲ್ಲಿ ಸದರಿ ಜಮೀನಿನ ಉತ್ತರ ಭಾಗದ 02 ಎಕರೆ ಜಮೀನನ್ನು ನೀಲಪ್ಪ ಮಹಾದೇವಪ್ಪ ಬಡಿಗೇರ ಇವರಿಗೆ 'ಡ' ನಂ.1443 ನೇದ್ದರ ಮೂಲಕ ರೂ.42,000/- ಗಳಿಗೆ ಖೀರಿದಿಗೆ ಕೊಟ್ಟು, ತನ್ನಷ್ಟಕ್ಕೆ ತಾನೇ ಹಣವನ್ನು ಉಪಯೋಗಿಸಿಕೊಂಡಿರುತ್ತಾನೆ. ದಕ್ಷಿಣ ಭಾಗದ 07 ಎಕರೆ 31 ಗುಂಟೆ ಜಮೀನನು ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕ ಪಂಚಾಯತಿ ಶಿರಹಟ್ಟಿ ಇವರಿಗೆ ದಿನಾಂಕ 28-04-2006 ರಂದು ರೂ.3,37,200/- ಗಳಿಗೆ ನಮ್ಮ ಭೂಮಿ ತಮ್ಮ ತೋಟ ಯೋಜನೆಯಲ್ಲಿ ಭೂರಹಿತ ಕೃಷಿ ಕಾರ್ಮಿಕ ಯೋಜನೆ ಅಡಿಯಲ್ಲಿ ಖರೀದಿಗೆ ಕೊಟ್ಟಿದ್ದು, ದೊಡ್ಡಫಕ್ಕೀರಪ್ಪನು ಏಕತ್ರ ಘರಾಣೆಯ ಪಿತ್ರಾರ್ಜಿತ ಆಸ್ತಿಯಲ್ಲಿ ವಾದಿಯರಿಗೆ ಹಾಗೂ 3 ರಿಂದ 14ನೇ ಪ್ರತಿವಾದಿಯರಿಗೆ ಹಿಸ್ಸೆ ಕೊಡಬಾರದು ಎಂಬ ದುಷ್ಟ ಇರಾದೆಯಿಂದ ಮೋಸದಿಂದ ಮಾಡಿದ ಖರೀದಿ ವ್ಯವಹಾರವು ವಾದಿಯರಿಗೆ ಬಂಧನಕಾರಿಯಾಗುವುದಿಲ್ಲ. 1 ಮತ್ತು 2ನೇ ಪ್ರತಿವಾದಿಯರಿಗೆ ದಾದವಾ ಆಸ್ತಿಯ ಪ್ರತ್ಯಕ್ಷ ಕಬ್ಜಾವನ್ನು ಕೊಟ್ಟಿರುವುದಿಲ್ಲ ಹಾಗೂ ದಿನಾಂಕ 12-07-2006 ರಂದು ಎಂ.ಆರ್. ನಂ.66/2005-06ನೇ ಸಾಲಿನಲ್ಲಿ ಆಗಿರುವ ಎಂಟ್ರಿಯು ವಾದಿಯರಿಗೆ ಯಾವುದೇ ರೀತಿಯ ನೋಟಿಸು ಜಾರಿಯಾಗಿರುವುದಿಲ್ಲ. ಕರ್ನಾಟಕ ಪಂಚಾಯತ ರಾಜ್ಯ ಕಾಯ್ದೆ 1993 ರ ಪ್ರಕಾರ ಕಲಂ 295(2) ರಡಿಯಲ್ಲಿ 1 ಮತ್ತು 2ನೇ

ಪ್ರತಿವಾದಿಯರು ಸರ್ಕಾರಿ ಅಧಿಕಾರಿಗಳಾಗಿರುವುದರಿಂದ ಕರ್ನಾಟಕ ಪಂಚಾಯತ ರಾಜ್ಯ ಕಾಯ್ದೆ 1993 ರ ಕಲಂ 289 ರ ಕೆಳಗೆ 60 ದಿವಸಗಳ ಪೂರ್ವಭಾವಿಯಾಗಿ ನೋಟಿಸು ಕೊಟ್ಟಿದ್ದು, ವಾದಿಯರು ತಮ್ಮ ಪಾಲಿಗೆ ಬರಬೇಕಾದ ಹಿಸ್ಸೆಯನ್ನು ದಿನಾಂಕ 16-02-2016 ರಂದು ದೊಡ್ಡಫಕ್ಕೀರಪ್ಪನ ವಾರಸುದಾರರಾದ 3 ರಿಂದ 6ನೇ ಪ್ರತಿವಾದಿಗೆ ಕೇಳಿದರೂ ಅವರು ವಾದಿಯರ ಪಾಲಿಗೆ ಬರುವ ತಲಾ 1/7 ಹಿಸ್ಸೆಯನ್ನು ಕೊಡಲು ನಿರಾಕರಿಸಿರುವುದರಿಂದ ಈ ದಾವೆಗೆ ವ್ಯಾಜ್ಯ ಕಾರಣ ಉಂಟಾಗಿರುವುದಾಗಿ ಎಂದು ಹೇಳಿ ವಾದ ಪತ್ರದಲ್ಲಿ ಕೇಳಿದಂತೆ ತಮ್ಮ ಪರ ಡಿಕ್ರಿ ಮಾಡಬೇಕೆಂದು ವಾದಿಯರು ಪ್ರಾರ್ಥಿತಿಸಿಕೊಂಡಿರುತ್ತಾರೆ.

5. ದಾವೆಯನ್ನು ನೋಂದಣಿ ಮಾಡಿಕೊಂಡು ಪ್ರತಿವಾದಿಯರಿಗೆ ಸಮನ್ಸ್ ಕಳುಹಿಸಲಾಗಿ ಪ್ರತಿವಾದಿಯರಿಗೆ ಸಮನ್ಸ್ ಜಾರಿಯಾಗಿದ್ದು, 1 ಮತ್ತು 2ನೇ ಪ್ರತಿವಾದಿಯರು ಶ್ರೀ.ಎಂ.ಐ.ಎಸ್., ವಕೀಲರ ಮೂಲಕ, 3 ಮತ್ತು 4ನೇ ಪ್ರತಿವಾದಿಯರು ಶ್ರೀ.ವಿ.ಎಲ್.ಪಿ., ವಕೀಲರ ಮೂಲಕ ಹಾಗೂ 7ನೇ ಪ್ರತಿವಾದಿಯು ಶ್ರೀ.ಬಿ.ಸಿ.ಪಿ., ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿದ್ದರೂ ಯಾವುದೇ ಲಿಖಿತ ಪತ್ರವನ್ನು ಸಲ್ಲಿಸಿರುವುದಿಲ್ಲ, 5, 6 ರಿಂದ 14ನೇ ಪ್ರತಿವಾದಿಯರಿಗೆ ಸಮನ್ಸ್ ಜಾರಿಯಾಗಿದ್ದರೂ ಕೂಡ ನ್ಯಾಯಾಲಯಕ್ಕೆ ಹಾಜರಾಗದೇ ಇರುವುದರಿಂದ ಅವರನ್ನು ಏಕತರ್ಫಿ ಎಂದು ಆದೇಶಿಸಲಾಗಿದೆ.

6. ಉಭಯ ಪಕ್ಷಗಾರರ ವಾದವನ್ನು ಕೇಳಲಾಯಿತು.

7. ಈ ಕೆಳಕಂಡ ಅಂಗಶಗಳು ನ್ಯಾಯಾಲಯದ ಗಮನಕ್ಕೆ ಬಂದಿರುತ್ತದೆ.

ಃ ಅ ಂ ಶ ಗ ಳು ಃ

1. ದಾವಾ ಆಸ್ತಿಯು ವಾದಿಯರ ಮತ್ತು ಪ್ರತಿವಾದಿಯರ ಮೂಲ ಪುರುಷನಾದ ಮಲಕಾಜಪ್ಪ ಘಟರಡ್ಡಿಹಾಳ ಇತನ ಆಸ್ತಿಯಿರುತ್ತವೆ ಎಂಬುವುದನ್ನು ವಾದಿಯರು ರುಜುವಾತುಪಡಿಸುವರೇ?

2. ವಾದಿಯರು ವಾದ ಪತ್ರದಲ್ಲಿ ಕೇಳಿರುವಂತೆ ಪಾಲು ಪಡೆಯಲು ಅರ್ಹರೇ?

3. ಯಾವ ಆದೇಶ ಅಥವಾ ಡಿಕ್ರಿ?

8. ವಾದಿಯರ ತಮ್ಮ ದಾವೆಯನ್ನು ರುಜುವಾತುಪಡಿಸಲು 2ನೇ ವಾದಿಯು ತನ್ನನ್ನು ಪಿಡಬ್ಲೂ-1 ಎಂದು ವಿಚಾರಣೆ ಮಾಡಿಕೊಂಡು 19 ದಾಖಲೆಗಳನ್ನು ನಿಪಿ-1 ರಿಂದ ನಿಪಿ-19 ಎಂದು ಗುರುತಿಸಿಕೊಂಡು ತಮ್ಮ ಪರವಾಗಿ ಸಾಕ್ಷಿ ವಿಚಾರಣೆ ಮುಕ್ತಾಯಗೊಳಿಸಿಕೊಂಡಿರುವರು.

9. ಉಭಯ ಪಕ್ಷಗಾರರ ವಾದವನ್ನು ಆಲಿಸಲಾಯಿತು ಈ ಮೇಲ್ಕಂಡ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಿರುವೇನು.

| | |
|---|---|
| ಅಂಶ ನಂ.1 | ಸಕಾರಾತ್ಮಕವಾಗಿ |
| ಅಂಶ ನಂ.2 | ಭಾಗಶಃ ಸಕಾರಾತ್ಮಕವಾಗಿ |
| ಅಂಶ ನಂ.3 | ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳು |

ಃ ಕಾ ರ ಣ ಗ ಳು ಃ

10. ಅಂಶ ನಂ. 1 ಮತ್ತು 2 ಃ ಈ ಅಂಶಗಳು ಮೇಲ್ನೋಟಕ್ಕೆ ಬೇರೆಯಾಗಿದ್ದರು ಆಂತರಿಕವಾಗಿ ಒಂದಕ್ಕೊಂದು ಸಂಬಂಧವನ್ನು ಹೊಂದಿರುವುದರಿಂದ ಮೇಲೆ ಹೇಳಿರುವ ಸಂಗತಿಯೆ

ಪುನರಾವರ್ತನೆಯಾಗುವುದನ್ನು ತಪ್ಪಿಸುವ ಸಲುವಾಗಿ ಅವುಗಳನ್ನು ಏಕಕಾಲಕ್ಕೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ. ದಾವಾ ಆಸ್ತಿಯು ವಾದಿಯರ ಮತ್ತು ಪ್ರತಿವಾದಿಯರ ಮೂಲ ಪುರುಷನಾದ ಮಲಕಾಜಪ್ಪ ಚೆನ್ನಬಸಪ್ಪ ಘಟರಡ್ಡಿಹಾಳ್ ಈತನ ಆಸ್ತಿಯಾರುತ್ತದೆ ಎಂಬುವುದನ್ನು ರುಜುವಾತುಪಡಿಸಲು 2ನೇ ವಾದಿಯು ತನ್ನನ್ನು ಪಿಡಬ್ಲೂ-1 ಎಂದು ವಿಚಾರಣೆಗೊಳಪಡಿಸಿಕೊಂಡು ನಿಪಿ-1 ರಿಂದ 19 ಎಂದು ದಾಖಲೆಗಳನ್ನು ಗುರುತಿಸಿಕೊಂಡಿದ್ದು. ಪಿಡಬ್ಲೂ-1 ತನ್ನ ಸಾಕ್ಷ್ಯ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ವಾದ ಪತ್ರದಲ್ಲಿ ಹೇಳಿರುವ ಸಂಗತಿಗಳನ್ನೇ ಯಥಾವತ್ತಾಗಿ ಪುನರುಚ್ಚರಿಸಿದ್ದು ದಾವಾ ಆಸ್ತಿ ಮಲಕಾಜಪ್ಪ ಚೆನ್ನಬಸಪ್ಪ ಘಟರಡ್ಡಿಹಾಳ್ ಇತನ ಆಸ್ತಿಯಾಗಿದ್ದು, ಪ್ರತಿವಾದಿಯರು ತಮ್ಮ ಹೆಸರುಗಳನ್ನು ದಾಖಲಿಸಿಕೊಂಡು ವಾದಿಯರ ಹಿಸ್ಸೆಯನ್ನು ಎತ್ತಿ ಹಾಕಬೇಕೆಂಬ ದುರುದ್ದೇಶವನ್ನು ಹೊಂದಿರುವುದಾಗಿ ಎಂದು ಸಾಕ್ಷಿ ನುಡಿದಿದ್ದು ತನ್ನ ಸಾಕ್ಷಿಗೆ ಪೂರಕವಾಗಿ ನಿಪಿ-1 ಮತ್ತು ರಿ.ಸ. ನಂ.3/3 ಕ್ಷೇತ್ರ 12 ಎಕರೆ 00 ಗುಂಟೆ ಜಮೀನಿನ ಪಹಣಿ ಪತ್ರಿಕೆಗಳಾಗಿದ್ದು ಸದರಿ ದಾಖಲೆಗಳನ್ನು ಪರಿಶೀಲಿಸಲಾಗಿ ಸದರಿ ದಾಖಲೆಯ ಕಾಲಂ ಸಂಖ್ಯೆ 9 ಮತ್ತು 12 ರಲ್ಲಿ ಮಲಕಾಜಪ್ಪ ಚೆನ್ನಬಸಪ್ಪ ಘಟರಡ್ಡಿಹಾಳ್, ನೀಲಪ್ಪ ಮಹಾದೇವಪ್ಪ ಬಡಿಗೇರ ಮತ್ತು ಕರ್ನಾಟಕ ರಾಜ್ಯದ ರಾಜ್ಯಪಾಲರ ತರ್ಫೆ ಮೇಃ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕ ಪಂಚಾಯತ ಶಿರಹಟ್ಟಿ ಇವರ ಹೆಸರುಗಳು ದಾಖಲಾಗಿರುವುದು ಸ್ಪಷ್ಟವಾಗಿ ಕಂಡುಬರುವುದು, ನಿಪಿ-3 ರಿಂದ 7 ರಿ.ಸ. ನಂ.3/3 ಕ್ಷೇತ್ರ 12 ಎಕರೆ 00 ಗುಂಟೆ ಜಮೀನಿನ ಪಹಣಿ ಪತ್ರಿಕೆಗಳಾಗಿದ್ದು ಸದರಿ ದಾಖಲೆಗಳನ್ನು ಪರಿಶೀಲಿಸಲಾಗಿ ಸದರಿ ದಾಖಲೆಯ ಕಾಲಂ ಸಂಖ್ಯೆ 9 ಮತ್ತು 12 ರಲ್ಲಿ ಮಲಕಾಜಪ್ಪ ಚೆನ್ನಬಸಪ್ಪ ಘಟರಡ್ಡಿಹಾಳ್ ಈತನ ಹೆಸರು ದಾಖಲಾಗಿರುವುದು ಸ್ಪಷ್ಟವಾಗಿ

ಕಂಡುಬರುವುದು, ನಿಪಿ-8 ಭೂ-ಮಾಪನ ಅಧಿಕಾರಿಗಳು ಶಿರಹಟ್ಟಿ ಇವರು ನೀಡಿದ ದಾವಾ ಆಸ್ತಿಯ ಹಾತ್ ನಕಾಶೆಯ ದೃಢೀಕೃತ ನಕಲಾಗಿದ್ದು, ನಿಪಿ-9 ಮತ್ತು 10 ಮರಣ ಪ್ರಮಾಣ ಪತ್ರಗಳಾಗಿದ್ದು, ನಿಪಿ-11 ಹಕ್ಕು ಬದಲಾವಣೆ ಆದೇಶ ಸಂಖ್ಯೆ 528 ರ ದೃಢೀಕೃತ ನಕಲಾಗಿದ್ದು, ಸದರಿ ದಾಖಲೆಯನ್ನು ನೋಡಲಾಗಿ ಮಲಕಾಜಪ್ಪ ಚೆನ್ನಬಸಪ್ಪ ಘಟರಡ್ಡಿಹಾಳ್ ಇತನು ದಿನಾಂಕ 26-05-1971 ರಂದು ರಿ.ಸ. ನಂ.3/3 ಜಮೀನನ್ನು ತನ್ನ ಮಕ್ಕಳ ಹೆಸರಿಗೆ ಹಕ್ಕು ಬದಲಾವಣೆ ಮಾಡಿರುವುದು ಕಂಡುಬರುತ್ತದೆ, ನಿಪಿ-12 ಹಕ್ಕು ಬದಲಾವಣೆ ಆದೇಶ ಸಂಖ್ಯೆ ಹೆಚ್-52/2011-12 ರಿ.ಸ. ನಂ.96 ರ ದೃಢೀಕೃತ ನಕಲಾಗಿದ್ದು, ನಿಪಿ-13 ಹಕ್ಕು ಬದಲಾವಣೆ ಆದೇಶ ಎಂ.ಆರ್. ಸಂಖ್ಯೆ 66/2005-06 ರಿ.ಸ. ನಂ.3/3 ರ ದೃಢೀಕೃತ ನಕಲಾಗಿದ್ದು, ನಿಪಿ-14 ಖರೀದಿ ಪತ್ರದ ದೃಢೀಕೃತ ನಕಲಾಗಿದ್ದು, ಸದರಿ ದಾಖಲೆಯನ್ನು ನೋಡಲಾಗಿ ಫಕ್ಕೀರಪ್ಪ ಮಲ್ಲಕಾಜಪ್ಪ ಘಟರಡ್ಡಿಹಾಳ ಇವರು ರಿ.ಸ. ನಂ.3/3 ಕ್ಷೇತ್ರ 10 ಎಕರೆ 00 ಗುಂಟೆ ಜಮೀನಿನ ಪೈಕಿ 07 ಎಕರೆ 31 ಗುಂಟೆ ಜಮೀನಿನನ್ನು ದಿನಾಂಕ 02-05-2006 ರಂದು ರೂ.3,37,200/- ಗಳಿಗೆ ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಮೆ: ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕ ಪಂಚಾಯತ ಶಿರಹಟ್ಟಿ ಮತ್ತು ಕಾರ್ಯದರ್ಶಿ ಗ್ರಾಮ ಪಂಚಾಯತ ವಡವಿ ಇವರಿಗೆ ಖರೀದಿ ಕಂಡುಬರುತ್ತದೆ, ನಿಪಿ-15 1 ಮತ್ತು 2ನೇ ಪ್ರತಿವಾದಿಯರಿಗೆ ಸಿವಿಲ್ ಪ್ರಕ್ರಿಯಾ ಸಂಹಿತೆ ಕಲಂ 80 ರಡಿಯಲ್ಲಿ ಪ್ರತಿವಾದಿಯರಿಗೆ ಕಾನೂನು ಬದ್ದ ನೋಟೀಸಿನ ಪ್ರತಿಯಾಗಿದ್ದು, ನಿಪಿ-16 ಮತ್ತು 17 1 ಮತ್ತು 2ನೇ ಪ್ರತಿವಾದಿಯರಿಗೆ ನೋಟಿಸು ಕಳುಹಿಸಿದ ಅಂಚೆ ರಸೀದಿಗಳಾಗಿದ್ದು, ನಿಪಿ-18 ಮತ್ತು 19 ಅಂಚೆ ಸ್ವೀಕೃತಿ ಪತ್ರಗಳಾಗಿರುವವು.

11. ಪ್ರತಿವಾದಿಯರು ದಾವಾ ಸಮನ್ಸ್ ಪಡೆದುಕೊಂಡು ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿದ್ದರೂ ಕೂಡ ಪ್ರತಿವಾದಿಯರು ತಮ್ಮ ಪರ ಯಾವುದೇ ಕೈಫಿಯತನ್ನು ಸಲ್ಲಿಸಿರುವುದಿಲ್ಲ, ಹಾಗೂ ಪಿಡಬ್ಲೂ-1 ನ್ನು ಪಾಟೀ ಸವಾಲಿಗೊಳಪಡಿಸಿಕೊಂಡಿರುವುದಿಲ್ಲ, ವಾದ ಪತ್ರದಲ್ಲಿ ಹೇಳಿರುವ ಸಂಗತಿಗಳನ್ನು ರುಜುವಾತುಪಡಿಸುವ ಭಾರವು ವಾದಿಯರ ಮೇಲೆ ಇರುವುದರಿಂದ 2ನೇ ವಾದಿಯಾದ ಪಿಡಬ್ಲೂ-1 ರವರ ಸಾಕ್ಷ್ಯ ಮತ್ತು ದಾಖಲೆಗಳಿಂದ ರುಜುವಾತುಪಡಿಸಿದ್ದರಿಂದ, ದಾವಾ ಆಸ್ತಿಯಲ್ಲಿ ವಾದಿಯರಿಗೆ ಹಿಸ್ಸೆ ಇರುವುದಿಲ್ಲ ಎಂದು ಸಿದ್ಧಪಡಿಸಲು ಪ್ರಯತ್ನಿಸದೇ ವಿಫಲರಾಗಿರುವುದರಿಂದ, ನಿಪಿ-1 ರಿಂದ 7 ರ ಪ್ರಕಾರ ವಾದಿಯರು ತಲಾ 1/7 ಅಂಶ ಹಿಸ್ಸೆ ಪಡೆಯಲು ಅರ್ಹರಾಗಿರುತ್ತಾರೆಂದು ತೀರ್ಮಾನಕ್ಕೆ ಬಂದಿರುತ್ತದೆ. ಈ ಹಂತದಲ್ಲಿ ಈ ನ್ಯಾಯಾಲಯವು ಈ ಕೆಳಗಿನ ನಿರ್ಧಾರಗಳನ್ನು ಅವಲಂಭಿಸಿರುತ್ತದೆ.

1) **1999(1) Kar. L.J. 485 (J.N.Patil V/s. Competent Authority, B.U.A. and D.C.)** wherein it has been held as under:

(B) CIVIL PROCEDURE CODE, 1908, Order 8, Rule 10 – Written statement – Omission to file and rebut plaint allegation – Plaint allegation is to be taken as correct.

HELD: It is one of the settled principles of law that when the allegations made in the petition by affidavit required to be controveted by the other side but the said allegations are not controverted by filing the counter or the rejoinder affidavit as the case may be, the said

allegations have to be deemed and are to be taken to be correct.

2) **1999(2) Kar. L.J. 85 (Narayan Venkatesh Pandit V/s. S.Nuroddin Khadri)** wherein it has been held as under:

(B) CIVIL PROCEDURE CODE, 1908, Order 8, Rule 5 – Evidence Act, 1872 Section 17 and 114 – Allegation of fact – Want of denial of – Adverse presumption of admission of fact alleged can be raised against party not leading evidence to deny fact alleged.

ಆದ್ದರಿಂದ ಈ ಮೇಲೆ ಹೇಳಿದ ನಿರ್ಧರಿತ ನಿರ್ಣಯದ ತತ್ವಗಳ ಪ್ರಕಾರ ಅಂಶ ನಂ. 1 ಮತ್ತು 2 ನ್ನು ಭಾಗಶಃ ಸಕಾರಾತ್ಮಕವಾಗಿ ಉತ್ತರಿಸಲಾಗಿದೆ.

12. ಅಂಶ ನಂ.3 : ಈ ಮೇಲೆ ಚರ್ಚಿಸಿದ ಅಂಶಗಳ ಆಧಾರದ ಮೇಲೆ ಈ ಕೆಳಗಿನಂತೆ.

## ಆದೇಶ

ವಾದಿಯರ ದಾವೆಯನ್ನು ಭಾಗಶಃ ಪುರಸ್ಕರಿಸಲಾಗಿದೆ.

ವಾದಿಯರು ದಾವಾ ಆಸ್ತಿಯಲ್ಲಿ ತಲಾ 1/7 ಅಂಶ ಪಾಲು ಪಾಲು ಪಡೆಯಲು ಅರ್ಹರಾಗಿರುತ್ತಾರೆಂದು ತೀರ್ಮಾನಿಸಲಾಗಿದೆ.

ವಾದಿಯರು ಮತ್ತು ಪ್ರತಿವಾದಿಯರು ಸಂಬಂಧಿಕರಾಗಿರುವುದರಿಂದ ಖರ್ಚಿನ ಬಗ್ಗೆ ಯಾವುದೇ ಆದೇಶವಿರುವುದಿಲ್ಲ.

ಮೇಲಿನಂತೆ ಡಿಕ್ರಿ ಬರೆಯಲು ಆದೇಶಿಸಲಾಗಿದೆ.

(ಶೀಘ್ರಲಿಪಿಗಾರಳಿಗೆ ನೇರವಾಗಿ ಗಣಕ ಯಂತ್ರದಲ್ಲಿ ಉಕ್ತಲೇಖನ ಕೊಟ್ಟು, ಅವರು ಬೆರಳಚ್ಚು ಮಾಡಿದ ನಂತರ ಅದನ್ನು ಓದಿ ತಪ್ಪುಗಳನ್ನು ತಿದ್ದಿದ ನಂತರ ತೆರೆದ ನ್ಯಾಯಾಲಯದಲ್ಲಿ ಈ ದಿನ ದಿನಾಂಕ 23ನೇ ಜೂನ್ 2018 ರಂದು ಘೋಷಿಸಿದ್ದೇನೆ.)

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ.ಗಳು, ಲಕ್ಷ್ಮೇಶ್ವರ.

ಅನುಸೂಚಿ

1. ವಾದಿಯರ ಪರ ಸಾಕ್ಷಿದಾರರ ಪಟ್ಟಿ

ಪಿಡಬ್ಲೂ-1 ಸಣ್ಣಫಕ್ಕೀರಪ್ಪ ಮಲಕಾಜಪ್ಪ ಘಟರಡ್ಡಿಹಾಳ

2. ಪ್ರತಿವಾದಿಯರ ಪರ ಸಾಕ್ಷಿದಾರರ ಪಟ್ಟಿ

- ಯಾರು ಇಲ್ಲ -

3. ವಾದಿಯರ ಪರ ಹಾಜರುಪಡಿಸಿದ ದಾಖಲಾತಿಗಳ ಪಟ್ಟಿ

| | |
|---|---|
| ನಿಪಿ-1 ರಿಂದ 7 | ರಿ.ಸ. ನಂ.3/3 ರ ಪಹಣಿ ಪತ್ರಿಕೆಗಳು |
| ನಿಪಿ-8 | ದಾವಾ ಆಸ್ತಿಯ ಹಾತ್ ನಕಾಶೆಯ ದೃಢೀಕೃತ ನಕಲು |
| ನಿಪಿ-9 ಮತ್ತು 10 | ಮರಣ ಪ್ರಮಾಣ ಪತ್ರಗಳು |
| ನಿಪಿ-11 | ಹಕ್ಕು ಬದಲಾವಣೆ ಆದೇಶ ಸಂಖ್ಯೆ 528 ರ ದೃಢೀಕೃತ ನಕಲು |
| ನಿಪಿ-12 | ಎಂ.ಆರ್. ಸಂಖ್ಯೆ ಹೆಚ್52/2011-12 ರ ದೃಢೀಕೃತ ನಕಲು |
| ನಿಪಿ-13 | ಎಂ.ಆರ್. ಸಂಖ್ಯೆ 66/2005-06 ರ ದೃಢೀಕೃತ ನಕಲು |
| ನಿಪಿ-14 | ಖರೀದಿ ಪತ್ರದ ದೃಢೀಕೃತ ನಕಲು |
| ನಿಪಿ-15 | 1 ಮತ್ತು 2ನೇ ಪ್ರತಿವಾದಿಯರಿಗೆ ನೋಟಿಸಿನ ಕಛೇರಿ ಪ್ರತಿ |
| ನಿಪಿ-16 ಮತ್ತು 17 | ಅಂಚೆ ರಸೀದಿಗಳು |
| ನಿಪಿ-18 ಮತ್ತು 19 | ಅಂಚೆ ಸ್ವೀಕೃತಿ ಪತ್ರಗಳು |

4. ಪ್ರತಿವಾದಿಯರ ಪರ ಹಾಜರುಪಡಿಸಿದ ದಾಖಲಾತಿಗಳ ಪಟ್ಟಿ

- ಏನೂ ಇಲ್ಲ -

ಪ್ರ.ದ.ನ್ಯಾ.ದ.ನ್ಯಾ., ಲಕ್ಷ್ಮೇಶ್ವರ.